**ಓ.ಎಸ್.ನಂಬ್ರ:150/2023 ಪಿ.ಡಬ್ಲ್ಯೂ :1**

ದಿನಾಂಕಃ 06-02-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಸಿ.ಆರ್.ಪಿ. ವಕೀಲರಿಂದ**

ನಾನು ದ್ವಿತೀಯ ಪಿಯುಸಿ ವರೆಗೆ ಓದಿರುತ್ತೇನೆ. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ನಾನು ಹಡವು ಗ್ರಾಮದ ಪಡುಕೋಣೆಯಲ್ಲಿ ವಾಸವಿದ್ದೇನೆ.

2. ವಾದಿ ದ್ವಿತೀಯ ಪಿಯುಸಿ ಡಿಪ್ಲೋಮ ಓದಿರುತ್ತಾರೆ. ಅವರು ಹಡವು ಗ್ರಾಮದ ಪಡುಕೋಣೆಯಲ್ಲಿ ವಾಸವಿದ್ದಾರೆ. ವಾದಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುವುದಿಲ್ಲ.

3. ನನ್ನ ತಾಯಿ ಲಚ್ಚ ಹೆಂಗಸು. ನನ್ನ ತಾಯಿಗೆ 4 ಜನ ಮಕ್ಕಳು. 15 ರಿಂದ 17 ಪ್ರತಿವಾದಿಯರು ಮತ್ತು ವಾದಿ ಲಚ್ಚ ಹೆಂಗಸುವಿನ ಮಕ್ಕಳು. ಲಚ್ಚನ ತಾಯಿ ಕಾವೇರಿ ಹೆಂಗಸು. ಕಾವೇರಿ ಹೆಂಗಸಿಗೆ 6 ಜನ ಮಕ್ಕಳು. ಅವರುಗಳು ಎಂದರೆ ಅಂತಿ, ಶಂಕರ, ಮಂಜ , ಗಿರಿಜ , ಸರಸ್ವತಿ ಮತ್ತು ಲಚ್ಚ. ಅಂತಿಗೆ 5 ಜನ ಮಕ್ಕಳು. 5 ರಿಂದ 11 ನೇ ಪ್ರತಿವಾದಿಗಳು ಅಂತಿ ರವರ ಮಕ್ಕಳು. 22 ನೇ ಪ್ರತಿವಾದಿ ಸರಸ್ವತಿಯ ಮಗ. 19 ಮತ್ತು 20 ನೇ ಪ್ರತಿವಾದಿಯರು ಗಿರಿಜಾರವರ ಮಕ್ಕಳು. ನನ್ನ ಅಜ್ಜಿಯ ತಂದೆ ತಿಮ್ಮ ದೇವಾಡಿಗ. ತಿಮ್ಮ ದೇವಾಡಿಗರಿಗೆ ಒಟ್ಟು 5 ಜನ ಮಕ್ಕಳು. ಅವರುಗಳೆಂದರೆ ಕಾವೇರಿ, ಸುಬ್ಬ, ಸೀನಾ, ಮರ್ಲಿ ಮತ್ತು ಕೃಷ್ಣ.

4. ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ನಿಪಿ 24 ರ ಆದೇಶದ ಪ್ರಕಾರ ಬಂದಿರುತ್ತದೆ. ನಿಪಿ 2 ರಲ್ಲಿ ತಿಮ್ಮ ನ ಮಕ್ಕಳು ಶ್ರೀನಿವಾಸ , ಮರ್ಲಿ ಮತ್ತು ಕೃಷ್ಣ ಸೇರಿಕೊಂಡಿದ್ದಾರೆ ಎಂದರೆ ಸರಿ. ನಿಪಿ.2 2014 ನೇ ಇಸವಿಯಲ್ಲಿ ಆಗಿರುತ್ತದೆ. 2014ನೇ ಇಸವಿಯಲ್ಲಿ ಕಾವೇರಿ ಮತ್ತು ಸುಬ್ಬ ದೇವಾಡಿಗರು ತೀರಿ ಹೋಗಿರುತ್ತಾರೆ. ಅವರು ಪಾಲುಪಟ್ಟಿ ಆಗುವ ಮೊದಲೇ ತೀರಿ ಹೋಗಿರುತ್ತಾರೆ. ನನ್ನ ತಾಯಿ ಲಚ್ಚ ಕೂಡಾ ತೀರಿ ಹೋಗಿರುತ್ತಾರೆ. ಕಾವೇರಿ ದೇವಾಡ್ತಿಯವರ ಮಗಳಾದ ಲಚ್ಚರವರನ್ನು ಹೊರತುಪಡಿಸಿ ಉಳಿದ ಮಕ್ಕಳು ಪಾಲುಪಟ್ಟಿಯಲ್ಲಿ ಸೇರಿಕೊಂಡಿರುತ್ತಾರೆ. ಆಶಾ ನನ್ನ ತಂಗಿ. ಅವರು ಪಾಲುಪಟ್ಟಿಗೆ

ಸೇರಿರುತ್ತಾರೆ. ನನ್ನ ತಂಗಿ ಆಶಾ ಮತ್ತು ನನ್ನ ಮಧ್ಯೆ ಯಾವುದೇ ವಿವಾದ ಇರಲಿಲ್ಲ. ನಮ್ಮ ಸಂಬಂಧ ಚೆನ್ನಾಗಿತ್ತು. ನಾವೆಲ್ಲಾ ಒಟ್ಟಿಗೆ ಇದ್ದೆವು.

5. ನಿಪಿ 23 ಭೂ ನ್ಯಾಯ ಮಂಡಳಿಗೆ ಸಲ್ಲಿಸಿರುವ ಅರ್ಜಿ. ನಿಪಿ 23 ನ್ನು ತಿಮ್ಮರವರ ಮಗ ಕೃಷ್ಣ ರವರು ಸಲ್ಲಿಸಿರುತ್ತಾರೆ. ನಿಪಿ 24 ಆದೇಶ ಆಗುವ ಮೊದಲು ದಾವಾ ಎ ಶೆಡ್ಯೂಲ್ ಆಸ್ತಿ ಗೇಣಿ ಜಮೀನಾಗಿತ್ತು. ದಾವಾ ಆಸ್ತಿಗೆ ತುಂಬಾ ಜನ ಭೂ ಮಾಲೀಕರು ಇದ್ದರು. ತಿಮ್ಮ ಗೇಣಿದಾರರಾಗಿದ್ದರು. ತಿಮ್ಮ ತೀರಿ ಹೋದ ನಂತರ ಅವರ ಮಗ ಕೃಷ್ಣ ಕುಟುಂಬದ ಪರವಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

6. ನಿಪಿ 24 ಆದೇಶದ ಪ್ರಕಾರ 4 ಎಕರೆ 10 ಸೆಂಟ್ಸ ಮಂಜೂರಾಗಿರುತ್ತದೆ. ದಾವೆಯಲ್ಲಿ ಎಷ್ಟು ಆಸ್ತಿಯನ್ನು ಸೇರಿಸಿದ್ದೇನೆ ಎಂದರೆ ನೆನಪಿಲ್ಲ. 4 ಎಕರೆ 10 ಸೆಂಟ್ಸ ಜಮೀನನ್ನು ದಾವೆಯಲ್ಲಿ ಸೇರಿಸಿದ್ದಾರೋ ಎಂದು ಗೊತ್ತಿಲ್ಲ. ನಿಪಿ 24 ಆದೇಶದ ಪ್ರಕಾರ ಸರ್ವೆ ನಂಬ್ರ.38/2 ರಲ್ಲಿ 2 ಸೆಂಟ್ಸ ಆಸ್ತಿ ಮಂಜೂರಾಗಿರುತ್ತದೆ ಹಾಗು ದಾವೆಯಲ್ಲಿ ಸರ್ವೆ ನಂಬ್ರ 38/2 ರಲ್ಲಿ 25 ಸೆಂಟ್ಸ ನ್ನು ಸೇರಿಸಿರುತ್ತಾರೆ ಎಂದರೆ ಸರಿ. ನಿಪಿ 24 ಆದೇಶದ ಪ್ರಕಾರ ಸರ್ವೆ ನಂಬ್ರ.71/1ರಲ್ಲಿ 5 ಸೆಂಟ್ಸ ಆಸ್ತಿ ಮಂಜೂರಾಗಿರುತ್ತದೆ ಹಾಗು ದಾವೆಯಲ್ಲಿ ಸರ್ವೆ ನಂಬ್ರ 71/1ರಲ್ಲಿ 15 ಸೆಂಟ್ಸ ನ್ನು ಸೇರಿಸಿರುತ್ತೇವೆ ಎಂದರೆ ಸರಿ. ನಿಪಿ 24 ಆದೇಶದ ಪ್ರಕಾರ ಸರ್ವೆ ನಂಬ್ರ.79/10-ಎರಲ್ಲಿ 10 ಸೆಂಟ್ಸ ಆಸ್ತಿ ಮಂಜೂರಾಗಿರುತ್ತದೆ ಹಾಗು ದಾವೆಯಲ್ಲಿ ಸರ್ವೆ ನಂಬ್ರ.79/10-ಎ ರಲ್ಲಿ 32 ಸೆಂಟ್ಸ ನ್ನು ಸೇರಿಸಿರುತ್ತೇವೆ ಎಂದರೆ ಸರಿ.

7. ಗೇಣಿ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ. ಯಾವ ಜಮೀನಿಗೆ ಎಷ್ಟು ಗೇಣಿಯನ್ನು ತಿಮ್ಮ ದೇವಾಡಿಗರವರು ನೀಡುತ್ತಿದ್ದರು ಎಂದು ಗೊತ್ತಿಲ್ಲ. ತಿಮ್ಮ ದೇವಾಡಿಗರವರಿಗೆ ಸಹೋದರ ಸಹೋದರಿಯರು ಇರುವುದು ಗೊತ್ತಿಲ್ಲ. ತಿಮ್ಮ ದೇವಾಡಿಗರವರು ಮೂಲತಃ ಎಲ್ಲಿಯವರು ಎಂದು ಗೊತ್ತಿಲ್ಲ. ಅವರು ಉಪ್ಪುಂದದಿಂದ ಹಡವು ಗ್ರಾಮಕ್ಕೆ ದೇವರ ಕೆಲಸ ಮಾಡಲು ಬಂದಿರುತ್ತಾರೆ. ಅವರು ಮೂಲತಃ ಉಪ್ಪುಂದದವರು. ತಿಮ್ಮ ದೇವಾಡಿಗರವರಿಗೆ ಉಪ್ಪುಂದದಲ್ಲಿ ಜಮೀನು ಇದ್ದಿರುವುದು ಗೊತ್ತಿಲ್ಲ. ತಿಮ್ಮ ದೇವಾಡಿಗರವರು ಉಪ್ಪುಂದದಿಂದ ಹಡವು ಗ್ರಾಮಕ್ಕೆ ಬಂದು ಮಹಾ ವಿಷ್ಣು ದೇವಾಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರು ದೈವದ ಮನೆಯನ್ನು ಸ್ಥಾಪಿಸಿರುತ್ತಾರೆ. ದಾವಾ ಆಸ್ತಿಯ ಐಟಂ ನಂಬ್ರ 1 ರಲ್ಲಿ ಕುಟುಂಬದ ದೈವದ ಮನೆ ಇದೆ. ದಾವಾ ಆಸ್ತಿಯಲ್ಲಿ ತಿಮ್ಮ ದೇವಾಡಿಗರವರ ಎಲ್ಲಾ ಮಕ್ಕಳಿಗೆ ಸಮಾನ ಹಕ್ಕು ಇದೆ ಎಂದರೆ ಸರಿ. ತಿಮ್ಮ ದೇವಾಡಿಗರವರ ಮೂಲಕ ಬಂದ ಕಾರಣ ಬುಡಸತಿ ಪಾಲಾಗಬೇಕು ತಲೆಸತಿ ಅಲ್ಲ ಎದಂರೆ ಸರಿಯಲ್ಲ. ಮುಖ್ಯ ವಿಚಾರಣೆಯ

ಪ್ರಮಾಣ ಪತ್ರದಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ವಾದಿ ನ್ಯಾಯಾಲಯಕ್ಕೆ ಬಂದರೆ ನಿಜ ಹೊರಬರುತ್ತದೆ ಎಂದು ಅವರನ್ನು ತಡೆದು ನಾನೇ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**